1	2	3			4
	36	Mannapur	...	...	1—8—1962
	37	Madlur	...	...	3—8—1962
	38	Hulagudde	...	...	10—8—1962
	39	Bonnakoppal	...	...	20—8—1962
	40	Karihalli	...	...	1—9—1962
	41	Tummaraguddi	...	...	20—9—1962
	42	Vangera	...	...	22—9—1962
	43	Chandihal	...	...	1—10—1962
	44	Mangalore	...	...	3—10—1962
1962-63	45	Kudurimoti	...	...	17—10—1962
	46	Male Koppa	...	...	18—10—1962
	47	Binnal	...	...	18—10—1962
	48	Toudihal	...	...	18—10—1962
	49	Balgeral	...	...	25—12—1962
	50	Basalpur	...	...	28—2—1963

(*b*) Wells have been completed in 16 cases; they are in progress in 22 cases and action is being pursued in the others.

ಶ್ರೀ ವೀರಭದ್ರಪ್ಪ ಈರಪ್ಪ.—ತಮ್ಮ ಉತ್ತರದಲ್ಲಿ 16 ಬಾವಿಗಳ ಕಾಮಗಾರಿಯನ್ನು ಪೂರೈಸಲಾಗಿವೆ, 22 ಬಾವಿಗಳ ಬಗ್ಗೆ ಕಾಮಗಾರಿಯು ಮುಂದುವರಿಯುತ್ತಿದೆ ಎಂದು ತಿಳಿಸಿದ್ದೀರಿ. ಹಾಗೆ ಪೂರೈಸಲಾದ ಬಾವಿಗಳ ಹೆಸರು ಮತ್ತು ಮುಂದುವರಿಯುತ್ತಿರುವ ಕಾಮಗಾರಿಗಳ ಹೆಸರುಗಳು ಏನು ?

† ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಬಹಳ ದೊಡ್ಡ ಪಟ್ಟಿಯಾಗುತ್ತದೆ, ಅದನ್ನು ತಮಗೆ ಕೊಡುತ್ತೇನೆ, ಮತ್ತು ಸದ್ಯದಲ್ಲಿ ಮತ್ತೆ 6 ಬಾವಿಗಳ ಕೆಲಸ ಪೂರ್ಣವಾಗಿದೆ, ಅದು ಯಾವ ಹಳ್ಳಿಯಲ್ಲಿ ಆಗಿದೆ ಎಂಬುದನ್ನೂ ಕೂಡ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

Nationalising the bus routes of Kushalnagara-Mercara-Puttur-Mangalore.

*Q.—480. Sri S. SUBBAYYA NAIK (Sullia).—

Will the Government be pleased to state:—

(*a*) when they propose to nationalise the bus route, namely. Kushalnagara-Mercara-Puttur-Mangalore routes;

(*b*) whether they would allow the private buses now plying on the above routes to run on some other routes, issuing licences to the affected operators;

(*c*) whether they would purchase private buses now plying on the routes proposed to be nationalised;

(*d*) whether they would take action to absorb Drivers, Conductors and other staff attached to such Private Service in Government Transport Services?

A.—Sri **D. DEVARAJ URS** (Minister for Labour, Housing and Transport).—

(*a*) A draft scheme proposing to nationalise the Road Section, Kushalnagara-Mercara-Puttur-Mangalore, along with a few other Road Sections, has been published by the State Transport Undertaking. The scheme will be implemented after it is approved and permits are issued by the competent authorities.

(*b*) The Regional Transport Authority is the authority to offer permit on alternate routes not covered by notification.

(*c*) The State Transport undertaking would be prepared to purchase the buses of displaced operators, if offered, provided the buses of the private operators conform to the required standards and the purchase price is agreed upon.

(*d*) The staff employed by displaced operators are given preference by the State Transport Undertaking.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಖಾಸಗೀ ಬಸ್ ಡ್ರೈವರ್‌ಗಳನ್ನು ಗವರ್‌ನಮೆಂಟಿಗೆ ತೆಗೆದುಕೊಳ್ಳುವಾಗ ಅವರ ಹಿಂದಿನ ಸರ್ವೀಸನ್ನು ಏನಾದರೂ ಅವರಿಗೆ ಕೊಡಲಿಕ್ಕೆ ಆಗುತ್ತದೆಯೇ?

†ಶ್ರೀ ಡಿ. ದೇವರಾಜ್ ಅರಸ್.—ಹಿಂದಿನ ಸರ್ವೀಸನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಪ್ರೈವೇಟ್ ಬಸ್ ರೂಟ್ಸ್‌ನ್ನು ರಾಷ್ಟ್ರೀಕರಣ ಮಾಡುವಾಗ ಪ್ರೈವೇಟ್ ರೂಟ್‌ನಲ್ಲಿ ಓಡಾಡುತ್ತಿದ್ದ ಬಸ್‌ಗಳನ್ನು ಗವರ್ನಮೆಂಟಿನವರು ತೆಗೆದು ಕೊಳ್ಳುತ್ತಾರೆಯೇ? ತೆಗೆದುಕೊಳ್ಳುವುದಾದರೆ ಯಾವ ರೀತಿ ಕಾಂಪೆನ್‌ಸೇಷನ್ ಕೊಡುತ್ತಾರೆ?

ಶ್ರೀ ಡಿ. ದೇವರಾಜ್ ಅರಸ್.—ಕಾಂಪೆನ್‌ಸೇಷನ್ ಕೊಡಬೇಕೆಂದು ಅಲ್ಲ, ಕಾಂಪೆನ್‌ಸೇಷನ್‌ಗೆ ಅವರು ಅರ್ಹರಾಗಿದ್ದ ಪಕ್ಷದಲ್ಲಿ ಮೋಟಾರ್ ವೆಹಿಕಲ್ಸ್ ಆಕ್ಟ್ ಚಾಪ್ಟರ್ 4 (ಎ) 68ನೇ (ಜಿ) ಸೆಕ್ಷನ್ ಪ್ರಕಾರ ಯಾವ ರೀತಿ ಕೊಡಬೇಕೆಂಬುದು ಅದರಲ್ಲಿ ನಮೂದು ಆಗಿದೆ ಅದರಂತೆ ಕಾಂಪನ್‌ಸೇಷನ್ ಕೊಡುತ್ತಾರೆ. ಎರಡನೆಯದು ಅವರು ಹಾಲಿ ಓಡಾಡಿನುತ್ತಾ ಇರತಕ್ಕ ಬಸ್ಸುಗಳನ್ನು ನಾವು ತೆಗೆದುಕೊಳ್ಳಬೇಕೆಂದರೆ ನಮ್ಮದೇನೂ ಅಭ್ಯಂತರವಿಲ್ಲ, ತೆಗೆದುಕೊಳ್ಳೋಣ. ಆದರೆ ಖರೀದಿ ವಗೈರೆ ವಿಷಯದಲ್ಲಿ ನಮಗೂ ಅವರಿಗೂ ಹೊಂದಾಣಿಕೆ ಆಗಬೇಕು. ಬಸ್ ಬಾಡಿ ಕಂಡೀಷನ್ ಚೆನ್ನಾಗಿರಬೇಕು. ಇದೆಲ್ಲಾ ನೋಡಬೇಕಾಗುತ್ತದೆ. ಅವರು ಕೊಡುವುದಾದರೆ ತೆಗೆದುಕೊಳ್ಳುವುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ.

Sri **G. V. GOWDA**.—Is it not a fact that Government had already approved a year or two ago for nationalising the bus routes in South Canara district and if so what has happened to it?

Sri **D. DEVARAJ URS**.—We have published the scheme now. There is no question of Government approving it sometime previously.

ಶ್ರೀ ಎಸ್. ಸುಬ್ಬಯ್ಯ ನಾಯಕ್.—(ಬಿ) ಪ್ರಶ್ನೆಗೆ ಉತ್ತರ ಕೊಡುತ್ತಾ ಪ್ರಾದೇಶಿಕ ಸಾರಿಗೆ ಅಧಿಕಾರಿಯವರೇ ಪರವಾನೆಗಳನ್ನು ಕೊಡುತ್ತಾರೆ ಎಂದು ಹೇಳಿದ್ದೀರಿ. ಎಂದರೆ ಅವರು ಇಂಟೀರಿಯರ್ ರೂಟ್ಸ್‌ನಲ್ಲಿ ಹೋಗುವುದಕ್ಕೆ ಈಗ ಓಡಾಡುತ್ತಿರುವ ಬಸ್‌ಗಳಿಗೆ ಪರವಾನೆಗಳನ್ನು ಕೊಡುತ್ತಾರೆ ಎಂದು ಅರ್ಥವೇ?

ಶ್ರೀ ಡಿ. ದೇವರಾಜ್ ಅರಸ್.—ಅದೂ ಕೂಡ ನಾನು ಸರಕಾರದ ವತಿಯಿಂದ ಕೊಡಬೇಕೇ ಬಿಡಬೇಕೇ ಅಂತ ಹೇಳುವುದಕ್ಕೆ ಕಾನೂನು ರೀತಿಯಿಂದ ನನಗೆ ಅಧಿಕಾರ ಇಲ್ಲ. ಮೋಟಾರ್ ವೆಹಿಕಲ್ಸ್ ಆಕ್ಟ್‌ನ ಕೆಳಗೆ ಎಸ್. ಟಿ. ಎ. ಅಥವಾ ಆರ್. ಟಿ. ಎ. ಅಂತ ಹೇಳಿ ಅಥಾರಿಟಿ ಕ್ರಿಯೇಟ್ ಮಾಡುತ್ತಾರೆ, ಈ ಅಧಿಕಾರ ಅವರಿಗೆ ಇರುವುದು, ಅದೂ ಕೂಡ ಕಾನೂನಿನಲ್ಲಿ ನಮೂದು ಆಗಿದೆ. ಸೆಕ್ಷನ್ 68 (ಜಿ) (2) ಅಂತ ಹೇಳಿ ಒಂದು ಕಲಂ ಇದೆ ಅದರ ಪ್ರಕಾರ ಸಂಬಂಧಪಟ್ಟ ಆರ್. ಟಿ. ಎ. ಅವರು ಅವರಿಗೆ ಕಾಂಪೆನ್‌ಸೇಷನ್ ಕೊಡುವುದಕ್ಕೆ ಹೇಳಬಹುದು ಅಥವಾ ಬೇರೆ ಯಾವುದಾದರೂ ಮಾರ್ಗಗಳನ್ನು ಕೊಡುವುದಕ್ಕೆ ಅವರಿಗೆ ಅಧಿಕಾರ ಇದೆ. ಅವರು ಕೊಡಬಹುದು ಇವರು ತೆಗೆದುಕೊಳ್ಳಬಹುದು, ಅದು ನಮಗೆ ಸಂಬಂಧಪಟ್ಟದ್ದು ಅಲ್ಲ.

ಶ್ರೀ ಎಂ. ಸಿ. ಬನಪ್ಪ.—ರಾಷ್ಟ್ರೀಕರಣ ಮಾಡುವಾಗ ಏರಿಯಾವೈಸ್ ಮಾಡದೆ, ರೂಟ್ ವೈಸ್ ಮಾಡುವುದರಿಂದ ಜನಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಏರಿಯಾವೈಸ್ ಮಾಡುವುದರಿಂದ ತಾಲ್ಲೂಕು ಹೆಡ್‌ಕ್ವಾರ್ಟರಿನಿಂದ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಒಂದೇ ಬಸ್‌ನಲ್ಲಿ ಪ್ರಯಾಣ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ನಾವು ಮಾಡಿರತಕ್ಕ ಸ್ಕೀಂ ಏರಿಯಾವೈಸ್ ಅಲ್ಲ ರೂಟ್ ವೈಸೇ ಮಾಡಿದ್ದೇವೆ.

Loans due from the Societies to the District Central Co-operative Bank, Hassan.

*Q.—502. Sri B. H. LAKSHMANAIAH (Belur).—

Will the Government be pleased to state :—

(*a*) the names of Societies from which loans are due to the District Central Co-operative Bank, Hassan, and since how long these Societies are in overdues to the District Central Co-operative Bank (yearwar figures to be furnished) ;

(*b*) the action they have taken to recover these overdues and since when ;

(*c*) whether it is a fact that these overdues are due to the fact of negligence and not taking recovery procedure in time by the authority ;

(*d*) the authority that is entrusted with the work of recovering the overdues ?

A.—Sri KONDAJJI BASAPPA (Deputy Minister for Co-operation).—

(*a*) *Vide* statement placed on the Table of the House.

(*b*) Since February 1961 ; action has been taken to recover the overdues by persuasion and by filing cases, obtaining decrees and executing them.

(*c*) No.

(*d*) The Assistant Registrar of Co-operative Societies, Hassan.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—(ಬಿ) ಪ್ರಶ್ನೆಗೆ ಉತ್ತರವಾಗಿ 1961ನೆಯ ಇಸವಿ ಫೆಬ್ರವರಿ ತಿಂಗಳ ಲಾಗಾಯಿತು ಈ ಬಾಕಿಗಳನ್ನು ವಸೂಲ್ಮಾಡುವ ಬಗ್ಗೆ ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದೀರಿ, ತಾವು ಕೊಟ್ಟಿರತಕ್ಕ ಸ್ಟೇಟ್‌ಮೆಂಟಿನಲ್ಲಿ ನೋಡಿದರೆ ಕೆಲವು ಸೊಸೈಟಿಗಳಲ್ಲಿ 1960-61ರಲ್ಲಿ ಎಷ್ಟು ಹಣ ಬಾಕಿ ಇತ್ತೋ ಅಷ್ಟೇ ಹಣ ಬಾಕಿ ಇದೆಯಲ್ಲಾ ಇದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ರೆಕವರಿ ಇಫೆಕ್ಟೀವ್ ಆಗಿ ಮಾಡಿಲ್ಲ ಆದ್ದರಿಂದ ಬಾಕಿ ಇದೆ ಅಷ್ಟೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಬ್ಯಾಂಕಿಗೆ ಒಟ್ಟು ಬರಬೇಕಾದ ಸಾಲವೆಷ್ಟು ? ರಿಬೇಟ್ ಕೊಡುವುದುಂಟೆ ?

ಶ್ರೀ ಕೊಂಡಜ್ಜಿ ಬಸಪ್ಪ.—16-3-64ರಲ್ಲಿ ಒಟ್ಟು ಸಾಲ 42 ಲಕ್ಷ ಚಿಲ್ಲರೆ ಬರಬೇಕಾಗಿತ್ತು, ಮಾಡಿಯಂ ಟರ್ಮ್ ಲೋನ್ 7 ಲಕ್ಷ 82 ಸಾವಿರ ಬರಬೇಕಾಗಿತ್ತು. ರಿಬೇಟ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಅಂಗಡಿ ಚನ್ನಬಸಪ್ಪ.—ಎಲ್ಲಾ ಸೆಂಟ್ರಲ್ ಬ್ಯಾಂಕುಗಳಲ್ಲೂ ಅಸಿಸ್ಟೆಂಟ್ ರಿಜಿಸ್ಟ್ರಾರರೇ ಸೆಕ್ರೆಟರಿಯಾಗಿರುವುದರಿಂದ ಅವರಿಗೇ ಎಗ್ಸಿಕ್ಯೂಷನ್ ಕೆಲಸ ವಹಿಸುವುದು ನ್ಯಾಕ್ಯವೇ ? ಆ ಅಧಿಕಾರ ಅವರಿಗೆ ಕೊಡಲಾಗಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದನ್ನಾಗಲೇ ಕೊಡಲಾಗಿದೆ.